ವಿಭಿನ್ನ ಆಲೋಚನೆಗಳ ಶಬ್ದರೂಪಗಳಾಗಿದ್ದವು. ಆದರೆ, ಅವನು ಎಷ್ಟೆಷ್ಟು ತಾರ್ಕಿಕವಾಗಿ ಮತ್ತು ಪ್ರಬಲವಾಗಿ ಮುಗ್ಧತೆಯನ್ನು ಸಾಬೀತುಪಡಿಸಲು ಯತ್ನಿಸುತ್ತಿದ್ದನೋ ಅಷ್ಟಷ್ಟೂ ಜನ ಅವನನ್ನು ಅನುಮಾನಿಸಿದರು.

ಜನರ ಈ ಕ್ರೂರ ಅಪಹಾಸ್ಯ ಅವನನ್ನು ಪ್ರತಿ ಗಳಿಗೆಯೂ ಹೊಸತೊಂದು ನೋವಿನಂತೆ ಇರಿಯತೊಡಗಿತು.

ಇನ್ನಾವುದೇ ಪ್ರಯತ್ನ ಕೇವಲ ನಿಷ್ಪ್ರಯೋಜಕ ಎಂಬುದೂ ಅವನಿಗೆ ಮನದಟ್ಟಾಯಿತು. ಕೊರಗಿ ಕೊರಗಿ ದಿನೇದಿನೇ ನಶಿಸಿ ಹೋಗತೊಡಗಿದ.

ಇಷ್ಟಾದರೂ ಲೋಕದ ಜನರ ಕುಚೋದ್ಯ ಅವನಿಗೆ ತಪ್ಪಲಿಲ್ಲ. ಅವನ ಪಾಡಿಗೆ ಕೂತಿದ್ದರೂ ಕರೆಯುವರು... ''ಬಾರಯ್ಯ ಇಲ್ಲಿ ದೊಡ್ಡ ಮನುಷ್ಯ... ಎಲ್ಲಿ, ನಿನ್ನ ತಂತಿಯ ತುಂಡಿನ ಕತೆ ಹೇಳು ನೋಡೋಣ?'' ಎಂದು ಉಬ್ಬಿಸುವರು! ಆ ಮುಗ್ಧನೋ... ದೊಡ್ಡದೊಡ್ಡ ಯುದ್ಧಗಳನ್ನು ಗೆದ್ದುಬಂದ ಶೂರ ಯೋಧನದೇ ರೀತಿಯಲ್ಲಿ ವೀರಾವೇಶದಿಂದ ಎದೆಯುಬ್ಬಿಸಿ ತನ್ನ ಋಜುತನದ ಇಡೀ ಪ್ರಸಂಗವನ್ನು ತನ್ಮಯನಾಗಿ ಬಿತ್ತರಿಸುವನು! ಆದರೂ... ಅವನ ಅಂತರ್ಯಕ್ಕೆ ಗೊತ್ತು...''ಇಲ್ಲ... ಇದಾವುದರಿಂದಲೂ ಏನೂ ಪ್ರಯೋಜನ ಇಲ್ಲ.'' ನೋವು ಅವನ ಎದೆಯಾಳಕ್ಕೆ ಇಳಿದಿಳಿದು ಚೇತನವೆಲ್ಲ ಸೋರಿಹೋಗತೊಡಗಿತು.

ಡಿಸೆಂಬರ್ ಕಡೆಯ ವೇಳೆಗೆ ಅವನು ಪೂರಾ ನಿತ್ರಾಣನಾದ. ಇನ್ನು ಮೇಲೇಳಲಾಗದೆ ಹಾಸಿಗೆಯನ್ನೇ ಹಿಡಿದ.

ಜನವರಿ ತಿಂಗಳ ಮೊದಲ ವಾರದಲ್ಲಿ ವೃದ್ಧ ಕೃಷಿಕ ಹಾಶ್‌ಕಾಮ್ ತೀರಿ ಹೋದ. ಕಡೆ ಕಡೆಯ ನಾನಾ ಬಗೆಯ ಸಾವಿನ ಸಂಕಟಗಳ ನಡುವೆಯೂ ಆತ ಭ್ರಮಿತನಾಗಿ ತೊದಲು ಮಾತುಗಳಲ್ಲಿ ತನ್ನ ಪ್ರಾಮಾಣಿಕತೆಯನ್ನು ಪ್ರತಿಪಾದಿಸುತ್ತಲೇ ಇದ್ದ...

"ಒಂದು ತಂತಿಯ ತುಂಡು... ಸಣ್ಣದೊಂದು ತುಂಡು, ಅಷ್ಟೇ. ಅದು ಇಲ್ಲೇ ಇದೆ ಮೇಯರ್... ನೋಡಿ ಬೇಕಿದ್ದರೆ!"

## ಗೈ ದಿ ಮೊಪಾಸಾ (1850 – 1893)

ಜೀವನವನ್ನು ಪ್ರತಿಬಿಂಬಿಸುವ ಕಥಾವಸ್ತು ಮತ್ತು ಮನೋಜ್ಞ ಅಭಿವ್ಯಕ್ತಿಗೆ ಹೆಸರುವಾಸಿಯಾದ ಫ್ರೆಂಚ್ ಕತೆಗಾರ ಮೊಪಾಸಾನದು ಸಣ್ಣಕತೆಯ ಕ್ಷೇತ್ರದಲ್ಲಿ ಬಹುಮುಖ್ಯ ಹೆಸರು. 300 ಸಣ್ಣಕತೆ, ಆರು ಕಾದಂಬರಿ, ಮೂರು ಪ್ರವಾಸ ಕಥನಗಳನ್ನು ಮೊಪಾಸಾ ಬರೆದಿದ್ದಾನೆ. ಶಿಸ್ತಿನ ಬರವಣಿಗೆಯನ್ನೂ ರೂಢಿಸಿಕೊಂಡಿದ್ದ ಮೊಪಾಸಾಗೆ 1880 – 1891ರ ಅವಧಿಯಲ್ಲಿ ಹಣ ಹೆಸರು ಎಲ್ಲವೂ ಹರಿದು ಬಂದವು. ಆತನ ಜನಪ್ರಿಯತೆ ಆಗ ಎಷ್ಟಿತ್ತೆಂದರೆ, 1885ರಲ್ಲಿ ಬರೆದ ಎರಡನೇ ಕಾದಂಬರಿ ಕೇವಲ ನಾಲ್ಕು ತಿಂಗಳಲ್ಲಿ 37 ಮುದ್ರಣಗಳನ್ನು ಕಂಡಿತು.

## ಭಾರತೀ ಕಾಸರಗೋಡು

ಮೊದಲ ಕೃತಿ 'ವೀಣೆಯ ನೆರಳಿನಲ್ಲಿ' (ವೈಣಿಕ ಮೈಸೂರು ವಿ. ದೊರೆಸ್ವಾಮಿ ಅಯ್ಯಂಗಾರ್ ಅವರ ಆತ್ಮಕಥನ) 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಸಣ್ಣಕತೆ, ಲಲಿತ ಪ್ರಬಂಧ, ನಾಟಕ, ಮಕ್ಕಳ ಕತೆ, ಸ್ತ್ರೀ ಸಂವೇದನೆ, ವೈಚಾರಿಕ, ವಿಮರ್ಶೆಯ 30ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ. ರಾಜಕಾರಣಿ ಎಂ.ವೈ. ಘೋರ್ಪಡೆ ಅವರ ನಾಲ್ಕು ಇಂಗ್ಲಿಷ್ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ, ಪ್ರಕಟಿಸಿದ್ದಾರೆ.